ಅನ್ನಿಸುತ್ತದೆ. ನಿನ್ನೆ ಸಂಜೆ ಒಬ್ಬ ದೊಡ್ಡ ಮನುಷ್ಯರ ಮನೆಯಲ್ಲಿ ಪಾರ್ಟಿಯಿತ್ತು; ಪಾರ್ಟಿಗೆ ಬಂದ ಆಗಂತುಕರೊಬ್ಬರ ಎದುರಿಗೆ ಇಬ್ಬರು ಶಿಷ್ಟ ಮಹಿಳೆಯರ ಪರಿಚಯವನ್ನು ಮಾಡಿಸುತ್ತಾ ಅವನು ಆ ಇಬ್ಬರ ಪತಿಯರ ಹೆಸರನ್ನು ಅದಲು ಬದಲು ಮಾಡಿದ್ದ – "ಇವರು ಮಿಸೆಸ್ ವಿಶ್ವನಾಥಮ್, ಇವರು ಮಿಸೆಸ್ ಪರೀಕ್ಷಿತಮ್." ಆಗಲೇ ಮಿಸೆಸ್ ವಿಶ್ವನಾಥಮ್ ಕಿರುಚಿದಳು, "ನೀವು ತಪ್ಪು ಹೇಳಿದಿರಿ, ಅವರು ಮಿಸೆಸ್ ಪರೀಕ್ಷಿತಮ್." ಆಗಂತುಕರು ಅವನ ಮುಖವನ್ನು ಮುಗುಳ್ನಗುತ್ತಾ, ಪರಿಪಕ್ವವಲ್ಲದ ತಿಳಿವಳಿಕೆಯ ಪರಿಣಾಮ ಏನಾಗುವುದೆಂದು ಅವನಿಗೆ ತಿಳಿಯಪಡಿಸಲು ಬಯಸುವಂತೆ ನೋಡುತ್ತಿದ್ದರು.

ನಂತರ ಇಂದು ಬೆಳಗ್ಗೆ ಈ ವೃದ್ಧ.

ಇಷ್ಟೇ ಅಲ್ಲ, ಅಶೋಕ ರಸ್ತೆಗೆ ಬಂದು ಜನರನ್ನು ನೋಡಿ ಅವರ ಹೆಸರನ್ನು ಯೋಚಿಸುತ್ತಾನೆ, ಆದರೆ ಹೆಸರು ನೆನಪಿಲ್ಲ. ಯೋಚಿಸಿದಷ್ಟೂ, ಭ್ರಮೆಗೊಳಗಾಗುತ್ತಾನೆ. ಮಾಧವ ಬಾಬು ನಿಂತಿದ್ದಾರೆ. ಬೀಡಾ ಖರೀದಿಸುತ್ತಿದ್ದಾರೆ. ಐದು ತಿಂಗಳ ಹಿಂದೆ ಎರಡು ಪುಸ್ತಕಗಳನ್ನು ಓದಿ ಮರಳಿ ಕೊಡುವುದಾಗಿ ತೆಗೆದುಕೊಂಡು ಹೋಗಿದ್ದರು; ತದನಂತರ ಭೇಟಿಯಾಗಲಿಲ್ಲ. ಅಶೋಕ ಕಿರುಚಿದ – "ಶಂಕರ್ ಬಾಬು, ಓ ಶಂಕರ್ ಬಾಬು!" ಮಾಧವ ಬಾಬುಗಳು ಕೇಳಲಿಲ್ಲ, ಅವನು ಬೀಡಾ ಹಾಕಿಕೊಳ್ಳುವಲ್ಲಿ ತಲ್ಲೀನರಾಗಿದ್ದಾರೆ,

"ತಪ್ಪಿನಿಂದಾಗಿ ಕಾಚು ಹಾಕಿದೆ! ಇನ್ನೊಂದು ಬೀಡಾ ಮಾಡು. ನಕಲಿ ಜರ್ದಾ ಹಾಕಬೇಡ." ಪದೇಪದೇ 'ಶಂಕರ್ ಬಾಬು, ಶಂಕರ್ ಬಾಬು' ಎಂದು ಕರೆದರೂ ಅವರು ಹೊರಳಿ ನೋಡಲಿಲ್ಲ. ಅಶೋಕ ಅವರ ಬಳಿ ಹೋಗುವುದಕ್ಕೂ ಮೊದಲೇ ಅವರು ಬೀಡಾ ಪಡೆದು ಸೈಕಲ್‌ನ ಪೆಡಲ್ ಮೇಲೆ ಕಾಲು ಇಟ್ಟಿದ್ದರು. ಅಶೋಕ ಮುಂದೆ ಬಂದು ಹೇಳಿದ, "ಏನು ಸಾಹೇಬ್ರೆ, ಕರೆದರೂ ಕೇಳಿಸುವುದಿಲ್ಲವೇ? ನೀವು ತುಂಬಾ ಬಿಜಿಯಾಗಿರಬೇಕು?" ಮಾಧವ ಬಾಬು ಮುಗುಳ್ನಗುತ್ತಾ ಹೇಳಿದರು, "ಸಾಹೇಬರೇ, ಕೆಲಸದ ಮಾತನ್ನು ಈಗ ಹೇಳಬೇಡಿ, ನಿಮ್ಮ ಹಾಗೆ ಸ್ವತಂತ್ರನಾಗಿದ್ದರೆ, ವಿಷಯವೇ ಬೇರೆಯಿತ್ತು. ಇರಲಿ, ಬಹಳ ದಿನಗಳ ನಂತರ ನಿಮ್ಮ ಭೇಟಿಯಾಗಿದೆ. ಎಲ್ಲಾ ಕ್ಷೇಮ ತಾನೇ?"

"ನಡೀತಾ ಇದೆ," ಅಶೋಕ ಹೇಳಿದ, "ಕರೆದಾಗ ನಿಮ್ಮಿಂದ ಉತ್ತರ ಬರಲಿಲ್ಲ, ನೀವು ಮರೆತಿರಬೇಕೆಂದು ಯೋಚಿಸಿದೆ".

"ನೀವು ನನ್ನನ್ನು ಕರೆಯುತ್ತಿದ್ದಿರ?"

"ಹೌದು, ಗಟ್ಟಿಯಾಗಿ ಕರೆಯುತ್ತಿದ್ದೆ."

"ಆಶ್ಚರ್ಯ! ನನ್ನೆರಡು ಕಿವಿಗಳು ಎಲ್ಲಿಗೆ ಹೋಗಿದ್ದವು? ಈಗ್ಗೆ ಸ್ವಲ್ಪ ಹೊತ್ತಿಗೆ ಮೊದಲು ವ್ಯಕ್ತಿಯೊಬ್ಬ, 'ಮುನಿಸಿಪಾಲಿಟಿಯ ಆವರಣದೊಳಗೆ ಹಸು ಎತ್ತುಗಳನ್ನು ಬಿಟ್ಟರೆ ಸರ್ಕಾರಿ ದೊಡ್ಡಿಗೆ ಅಟ್ಟಲಾಗುವುದು' ಎಂದು ಹೇಳುತ್ತಾ ಹೋಗಿದ್ದನ್ನು ನಾನು ಕೇಳಿದೆ. ನಂತರ ತರಕಾರಿ ಮಾರುವವನು, 'ಎಳೆಯ ಸಿಹಿ ಹೀರೆಕಾಯಿ' ಎಂದು ಕೂಗುತ್ತಾ ಹೋದ. ಹಾಂ, ಮರೆತೆ. ಒಬ್ಬ 'ಶಂಕರ್ ಬಾಬು, ಶಂಕರ್ ಬಾಬು' ಎಂದು ಕರೆಯುತ್ತಲೂ ಹೋದ. ಬಹುಶಃ ಹಿಂದೆ ಶಂಕರನ ಬೀಡಾ ಅಂಗಡಿ ಇದೆ; ಅವನನ್ನೇ ಹುಡುಕುತ್ತಿರಬೇಕು. ಇವತ್ತು ಎಲ್ಲರೂ ಸಾಹೇಬರೇ ಅಲ್ಲವೇ? ಆದರೆ ನೀವು ನನ್ನನ್ನು ಯಾವಾಗ ಕರೆದಿರಿ?"

ಅಶೋಕನ ಮುಖದಲ್ಲಿ ಬೆವರ ಹನಿಗಳು ಮೂಡಿದವು. ಇವರು ಶಂಕರ್ ಬಾಬು ಅಲ್ಲವೆಂಬ ವಿಷಯ ತಿಳಿಯಿತು. ಒಂದೇ ಹೆಸರಿನವರಿರಬೇಕು. "ಹೋಗ್ಲಿ ಬಿಡಿ, ನಾನು ಕೂಗುತ್ತಿರಲಿಲ್ಲ. ಮೆಲ್ಲನೆ ಕರೆಯುತ್ತಿದ್ದೆ" ಎಂದ.